doc-40
TP-2

Regd. No M 1229 | 43rd Year | Sri 'Satyavadi' Mysore | 24—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ತುಕೇಗ್ರಾಮದಿಂದ ಪಾಕಿಸ್ತಾನದ ಸೇನೆ ವಾಪಸಾಗಿಲ್ಲ

ನವ ದೆಹಲಿ 22 — ಪಾಕಿಸ್ತಾನ ಒಪ್ಪಿರುವಂತೆ, ತುಕೆ ಗ್ರಾಮದಿಂದ ಸೇನೆ ವಾಪಸು ತೆಗೆದುಕೊಂಡು ಹೋಗುವಂತೆ ಪದೇ ಪದೇ ಪಾಕಿಸ್ತಾನಕ್ಕೆ ತಿಳಿಸಿದರಾಗ್ಯೂ ಆ ರೀತಿ ಮಾಡಿಲ್ಲವೆಂದು ಪಂ|| ನೆಹರು ರಾಜ್ಯಸಭೆಯಲ್ಲಿ ತಿಳಿಸಿದರು. ಉಪ ಮಂತ್ರಿ ಶ್ರೀ ಲಕ್ಷ್ಮೀ ಮೆನನ್ ಹೇಳಿಕೆಯಿತ್ತು. ತುಕೆಗ್ರಾಮದ 420 ಎಕರೆಗಳ ಪ್ರದೇಶದಲ್ಲಿ 170 ಎಕರೆ ಭಾರತದ ವಶದಲ್ಲಿದೆ ಎಂದರು. ಭಾರತದ ಸೂಚನೆಗೆ ಪಾಕಿಸ್ತಾನ ಉತ್ತರವನ್ನೇ ಇತ್ತಿಲ್ಲ.

ಗಲ್ಲೆಟ್‌ನಲ್ಲಿ ಸೇನೆ ನೆಲೆ

ನವ ದೆಹಲಿ 23 — ಗಿಲ್ಗಿಟ್‌ನಲ್ಲಿ ಸೇನೆ ನೆಲೆಯನ್ನಾಗಿ ಪಾಕಿಸ್ತಾನ ಅಭಿವೃದ್ಧಿ ಮಾಡುತ್ತಿರುವುದೆಂಬುದು ತಮಗೆ ತಿಳಿದಿರುವುದಾಗಿ ಈ ದಿನ ರಾಜ್ಯಸಭೆಯಲ್ಲಿ ಪಂ|| ನೆಹರು ಸೂಚಿಸಿದರು

ನಿರಾಕರಣೆ

ನವ ದೆಹಲಿ 23 — ಕಚ್‌ನ ರಾಣದ ಭಾಗವೊಂದನ್ನು ಪಾಕಿಸ್ತಾನ ಕೇಳಿರುವುದನ್ನು ವಿದೇಶ ಉಪಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್ ನಿರಾಕರಿಸಿ ಅದೊಂದು ಸೋಜಿಗದ ಸಂಗತಿ ಎಂದೂ ವಿವರಿಸಿದರು.

ಗುಣಮುಖ

ನವ ದೆಹಲಿ 23 — ಕೇಂದ್ರ ಒಳ ಆಡಳಿತ ಮಂತ್ರಿ ಪಂ|| ಗೋವಿಂದ ವಲ್ಲಭ ಪಂತರು ಸ್ವಲ್ಪ ಹೃದ್ರೋಗ ಪೀಡಿತರಾಗಿದ್ದು ಈಗ ಗುಣವಾಗುತ್ತಿದ್ದಾರೆ

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಸ್ಕೃತಿಷ್ಣು ಜೋಯಿಸರಿಂದ
೨೫ — ೪ತೀಯ ಅನೂರಾಧ

ಹೊಸ ಕೆಲಸ

ವಾಷಿಂಗ್ಟನ್ 23 — ವಿದೇಶ ವ್ಯವಹಾರಗಳ ವಿಶೇಷ ಸಲಹೆಗಾರರಾಗಿ ಅಧ್ಯಕ್ಷ ಐಸನ್‌ಹೋವರರು ಜಾರ್ಜ್ ಫಾಸ್ಟರ್ ಡಲ್ಲಸ್‌ರನ್ನು ನೇಮಕಮಾಡಿದ್ದಾರೆ

ಸಮಾಲೋಚನೆ

ವಾಷಿಂಗ್ಟನ್ 23 — ಜರ್ಮನಿಯ ಬಗ್ಗೆ ರಷ್ಯದೊಡನೆ ಮಾತುಕತೆ ಪಡುವ ಮೊದಲು, ಅಧ್ಯಕ್ಷ ಐಸನ್‌ಹೋವರರು ಅಮೇರಿಕಾ ಸೇನೆಯ ಉನ್ನತಾಧಿಕಾರಿಗಳನ್ನು ಶ್ವೇತಭವನಕ್ಕೆ ಕರೆಸಿ ವಿಶ್ವ ಪರಿಸ್ಥಿತಿಯ ಬಗ್ಗೆ ಮಾತುಕತೆ ನಡೆಸಿದರು ಸೇನಾ ಸಲಹೆಗಾರರು ರಾಜತಾಂತ್ರಿಕ ಸಲಹೆಗಾರರು ಇದ್ದರು

ಮಂತ್ರಿಮಟ್ಟದ ಸಭೆ

ಹೈದರಾಬಾದು 23 — ತುಂಗಭದ್ರಾ ನೀರಿನ ಹಂಚಿಕೆ ಬಗ್ಗೆ ಮೇ 20 ನೇ ತಾ|| ಮಂತ್ರಿಮಟ್ಟದ ಸಮ್ಮೇಳನ ಬೆಂಗಳೂರಿನಲ್ಲಿ ಸಮಾವೇಶವಾಗುವುದು ತುಂಗಭದ್ರಾ ವಿದ್ಯುತ್ಶಕ್ತಿಯಿಂದ ದೊರೆವ ವಿದ್ಯುತ್ ಹಂಚಿಕೆ ಬಗ್ಗೆ ಕೂಡ ಮಾತುಕತೆ ನಡೆಯುವುದು

ಗಡೀಪಾರು

ಬೊಂಬಾಯಿ 23 — ಭಾರತ ವಿರುದ್ಧ ಚಟುವಟಿಕೆಯಲ್ಲಿ ನಿರತಳಾಗಿದ್ದ ಗೋವಾ ರಾಷ್ಟ್ರೀಯಳಾದ ಶ್ರೀಮತಿ ಮೇರಿಯ ಎಲ್ಸ ಲಿಲಿಯರ್ ರಿಬೆರೊಳನ್ನು ಗೋವಾಕ್ಕೆ ಭಾರತ ಅಧಿಕಾರಿಗಳು ಗಡಿಪಾರು ಮಾಡಿದರು

ಮುಸ್ಸೋರಿ 23 — ಈ ದಿನ ದಲಾಯಿ ಲಾಮಾರೊಡನೆ ಪಂ|| ನೆಹರು ಭೇಟಿ ನಡೆಸುವರು

ಉಪನ್ಯಾಸ

ಮೈಸೂರು 23 — ಈ ತಿಂಗಳು 20 ನೆಯ ತಾ|| ನ್ಯೂಯಾರ್ಕಿನ ಎತಿಕ್ಸ ಇಂಸ್ಟಿಟ್ಯೂಟಿನಲ್ಲಿ ನೈತಿಕ ಮೌಲ್ಯ ಮತ್ತು ಶಕ್ತಿ ವಿಚಾರವಾಗಿ ಉಪನ್ಯಾಸವನ್ನು ಮೈಸೂರು ಮಹಾರಾಜರು ಮಾಡಿದರು ಮೇ 10 ನೆಯ ತಾ|| ಮಿನ್ನೆಸೋಟ ವಿಶ್ವವಿದ್ಯಾನಿಲಯದಲ್ಲಿ ಭಾರತ ಶಕ್ತಿ ಶಾಸ್ತ್ರದಲ್ಲಿ ಅವಧೂತ ಎಂಬ ವಿಚಾರವಾಗಿ ಉಪನ್ಯಾಸ ಮಾಡುವರು

ಪೌರಸಭೆ

ಮೈಸೂರು 23 — ಈ ದಿನ ಮೈಸೂರು ಪೌರಸಭೆಯ ಅಧಿವೇಶನ ಶ್ರೀ ಬಿ ಎಸ್ ಕಂಗೇಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದಿತು ಪೌರಸಭೆ ಸದಸ್ಯರಾದ ಶ್ರೀ ಅಜೀಜ ಸೇಟರು ಉಪವಾಸ ಹೂಡಿರುವದನ್ನು ಶ್ರೀಗಳಾದ ಶ್ರೀಕಂಠಶರ್ಮ ಮತ್ತು ಸೋಮಸುಂದರ ಶರ್ಮರು ಪ್ರಸ್ತಾಪಿಸಿ ಅವರ ಉಪವಾಸ ನಿಲ್ಲಲು ಅಧ್ಯಕ್ಷರು ಸೌಹಾರ್ದ ಪ್ರಯತ್ನ ಮಾಡಬೇಕೆಂದು ತಿಳಿಸಿದರು

ಸರ್ಕಾರಿ ಸೂಚನೆ

ವಿದ್ಯಾರ್ಥಿಗಳ ಜನನ ತಾರೀಖನ್ನು ಸರಿಯಾಗಿ ಕೊಡುವಂತೆ ತಂದೆತಾಯಿಗಳನ್ನು ಒತ್ತಾಯ ಮಾಡುವಂತೆ ಪ್ರಾಥಮಿಕ ಶಾಲೆ ಮತ್ತಿತರ ಸಂಸ್ಥೆಗಳಿಗೆ ಸರಕಾರ ಒತ್ತಾಯಿಸಿದೆ

ಬೆಂಗಳೂರು 23 — ಈ ದಿನ ಕರಗ ಮಹೋತ್ಸವ ಇಲ್ಲಿ ವೈಭವದಿಂದ ನೆರವೇರಿತು

೦ ೦

ಕಲ್ಕತ್ತಾ 23 — ಪೂರ್ವ ಪಾಕಿಸ್ತಾನದಲ್ಲಿರುವ ಭಾರತೀಯರು ಭೂಹೀನರಾಗುವ ಸಂಭವವಿದೆ.

ಪರಿಶೀಲನೆ

ಮುಸ್ಸೋರಿ 22 — ಪೀಕಿಂಗಿನ ಸರ್ಕಾರ ಮಾಡಿರುವ ಆರೋಪಣೆಗಳನ್ನು ದಲಾಯಿ ಲಾಮಾ ಪರಿಶೀಲಿಸುತ್ತಿರುವರು.

ನಿರ್ಬಂಧ

ನವ ದೆಹಲಿ 22 — ಭಾರತದ ಕಾರ್ಖಾನೆಯ ಜನರಲ್ ನೌಕರ ವರ್ಗದವರ ಸಂಚಾರದ ಬಗ್ಗೆ ಲಾಹೋರದಲ್ಲಿ ನಿರ್ಬಂಧ ವಿಧಿಸಿದೆ

ಒಮ್ಮತ ಚುನಾವಣೆ

ಬೆಂಗಳೂರು 23 — ಶಾಸನ ಸಭೆ ಕಾಂಗ್ರೆಸು ಪಕ್ಷದ ಕಾರ್ಯಕಾರಿ ಸಮಿತಿಯ ಚುನಾವಣೆ ಒಮ್ಮತದಿಂದ ಸಭೆಯಿತು ಶ್ರೀ ಟಿ. ಸುಬ್ರಹ್ಮಣ್ಯಂ ಉದಾನಾಯಕರಾಗಿ ಆಯ್ಕೆ ಆದರು ಶ್ರೀ ಕೆ. ಪುಟ್ಟಸ್ವಾಮಿ ಕಾರ್ಯದರ್ಶಿಯಾಗಿ ಆಯ್ಕೆ ಆದರು.

ಕಾರಂತರಿಗೆ ಸನ್ಮಾನ

ಉಡುಪಿ 22 — ಉಡುಪಿ ಪೌರಸಭೆ ನ್ಯಾಯಾಶ ಕನ್ನಡ ಸಾಹಿತಿ ಶ್ರೀ ಕೆ ಶಿವರಾಮ ಕಾರಂತರಿಗೆ ಮಾನಪತ್ರ ವರ್ಪಿಸಿತು.

— × —

ಲಂಡನ್ 23 — 3 ನೇ ಬಾರಿ ರಷ್ಯಾದಲ್ಲಿ ಮಾತುಕತೆ ನಡೆಸುವ ಸೋಫಿಯಾರನ್ನು ಬಂದೀಖಾನೆಗೆ ಕಳಿಸುವ ಮಸೂದೆಯನ್ನು ಕಾಮನ್ಸ್‌ಸಭೆ ಅಂಗೀಕರಿಸಿತು.

೦ ೦

ಶಿಲಾಂಗ್ 23 — ಚೀನಾವು ಬಂದ 2 ಕುದುರೆಗಳನ್ನು ಬಹಾದ್ದೂರು ಭಾರತಕ್ಕೆ ಅಧಿಕಾರಿಗಳಿಗೆ ಕೊಟ್ಟರು.

ಕರ್ನಾಟಕ ಬಗ್ಗೆ ಚರ್ಚೆ

ಬೆಂಗಳೂರು 22— ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯವೆಂದು ಬದಲಾಯಿಸಬೇಕೆಂಬ ಠರಾವನ್ನು ಪಿಎಸ್ಪಿ ಸದಸ್ಯ ರಾಮಸ್ವಾಮಿ ಮಂಡಿಸಿ 15 ನಿಮಿಷ ಕಾಲ ಚರ್ಚೆ ನಡೆಯಿತು — ಈ ಅಧಿವೇಶನದಲ್ಲಿ ಖಾಸಗೀ ವಿಷಯಗಳಿಗೆ ಇನ್ನು ದಿವಸಗಳಿಲ್ಲವಾಗಿ ಈ ಠರಾವು ಮುಂದಿನ ಅಧಿವೇಶನದಲ್ಲಿ ಬರಬೇಕಾಗಿದೆ.

ಪಿಲಾಂಗ್ 22 — ಲಾಸಾದಿಂದ ಮತ್ತೊಂದು ತಂಡ ಟಿಬೆಟೀಯರು ರಾಜಕೀಯ ಆಶ್ರಯಕ್ಕಾಗಿ ಭಾರತಕ್ಕೆ ಪ್ರವೇಸಿರುವರು.

ಆಯುರ್ವೇದ ಸಮ್ಮೇಳನ

ಉಡುಪಿ 20— ನಿಖಿಲ ಕರ್ನಾಟಕ ಆಯುರ್ವೇದಮಂಡಲ ಸಮ್ಮೇಳನವನ್ನು ಉಡುಪಿಯಲ್ಲಿ ಮೇ 17, 18, 19 ರಲ್ಲಿ ನಡೆಸಲು ಏರ್ಪಡಿಸಲಾಗಿದೆ — ಜೊತೆಯಲ್ಲಿ ಎಗ್ಜಿಬಿಷನ್ನೂ ನಡೆಯುವುದು.

ಡಾ|| ಮೋದಿಯವರ ನೇತ್ರ ಶಿಬಿರ

ಬೆಂಗಳೂರು 22— ಪದ್ಮಶ್ರೀ ನೇತ್ರ ದಾನಿ ಡಾ|| ಎಂ ಸಿ ಮೋದಿಯವರು ಬೆಂಗಳೂರು ಟಾಸ್ಕರ್ಟೌನ್ (ಶಿವಾಜಿನಗರ) ದಲ್ಲಿ ತಾ|| 26 ರಂದು ಉಚಿತ ನೇತ್ರ ಶಸ್ತ್ರಚಿಕಿತ್ಸಾ ಕ್ಯಾಂಪನ್ನು ನಡೆಸುವರು; ಎಲ್ಲ ರೋಗಿಗಳಿಗೂ ಮತ್ತು ಅವರನ್ನು ನೋಡಕೊಳ್ಳಲು ಬರುವವರಿಗೂ ಉಚಿತ ಆಹಾರದ ಏರ್ಪಾಡು ಮಾಡಲಾಗಿದೆ

ಭೂಗರ್ಭದಲ್ಲಿ ಬಿಸಿನೀರಿನ ಭಾರಿ ಸರೋವರ

ನಾಸ್ಕೊ 14— ಪಶ್ಚಿಮ ಸೈಬೀರಿಯಾದಲ್ಲಿ ಸಾವಿರಾರು ಘನ ಕಿಲೋಮೀಟರುಗಳ ವ್ಯಾಪ್ತಿಯ ಉಷ್ಣ ಜಲರಾಶಿಯು ಭೂಗರ್ಭದಲ್ಲಿದೆ, ಎಂದು ಸೋವಿಯೆತ್ ವಿಜ್ಞಾನಿಗಳ ಅಂದಾಜು ತಿಳಿಸುತ್ತದೆ: ಈ ನೀರಿನ ಉಷ್ಣೋಗ್ರತೆ ಸೆಂಟಿಗ್ರೇಡು 40 ಅಂಶಗಳಿಂದ 120 ಅಂಶಗಳವರೆಗಿರುತ್ತದೆ; ಭೂಗರ್ಭ ಸಾಗರದ ಕ್ಷೇತ್ರವು ಕನಿಷ್ಟಪಕ್ಷ 30 ಲಕ್ಷ ಚದರ ಕಿಲೋಮೀಟರುಗಳಷ್ಟಾಗಿದ್ದು, ಅಲ್ಲಿಯ ಉಷ್ಣಜಲ ನಿಕ್ಷೇಪವು ಅಪರಿಮಿತವಾಗಿದೆ.

o o

ಅಪೂರ್ವ ವೈಜ್ಞಾನಿಕ ಚಲಚ್ಚಿತ್ರ

ಮಾಸ್ಕೊ 15—ಅಂತಾರಾಷ್ಟ್ರೀಯ ಭೂಭೌತವರ್ಷ ಕಾರ್ಯಕ್ರಮಾನುಸಾರ ನಡೆದ ಸಂಶೋಧನೆಯನ್ನು ಚಿತ್ರಿಸುವ 'ಜಾಗರೂಕತೆ' ಎಂಬ ವರ್ಣರಂಜಿತ ಸುಧೀರ್ಘ ಚಲಚಿತ್ರವನ್ನು ಮಾಸ್ಕೋ ವಿಜ್ಞಾನ ಚಲನಚಿತ್ರಾಲಯವು ತಯಾರಿಸಿದೆ. ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವ ಪ್ರದೇಶಗಳಲ್ಲಿ ವಿಸ್ತಾರವಾದ ಕ್ಷೇತ್ರಗಳ ಮೇಲೆ ಸೋವಿಯತ್ ಮತ್ತು ವಿದೇಶ ವಿಜ್ಞಾನಿಗಳು ನಡೆಸಿದ ಸಮೀಕ್ಷೆಗಳನ್ನು ಈ ಚಲಚಿತ್ರವು ತೋರಿಸಿದೆ. ಈ ಚಿತ್ರದ ಪ್ರತಿಯೊಂದು ದೃಶ್ಯವೂ ಲೋಕನವೂ ಭೂಮಿಯು ಈ ಅಪರಿಚಿತ ಪ್ರದೇಶಕ್ಕೊಯ್ಯುವ ಸಾಹಸ ಯಾತ್ರೆಯ ದಿವ್ಯಾನುಭವವಾಗಿದೆ

ಅಪೆರಾ— 21–4–59 ರಿಂದ

ಜಯಸಿಂಹ ತೆಲುಗು

ಪಾತ್ರ— ಎಸ್ ಟಿ ರಾಮಾರಾವ್, ಅಂಜಲಿ

ಪ್ರತಿದಿನ 3 ಆಟಗಳು

ವುಡ್‌ಲ್ಯಾಂಡ್ಸ್

Glorious 4th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ: ನೂತನ್, ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

SHAKTI SUDHA

A Superb Tonic

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
Contract above 100 inches	1-00
500	0-75

Column length 12½ inches; width 2 inches; 4 columns to a page.

The decision of the management is final in all matters.

Manager "Satyavadi", Chamarajpuram, Mysore

THE DIFFERENCE BETWEEN THIS...

TRADE ITL MARK

AND THIS... IS ALWAYS THIS..

GRIPE SYRUP I.T.L.

For digestive disorders of children.

THE MYSORE INDUSTRIAL & TESTING LABORATORY LTD., BANGALORE-3.

Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—

71/4 Arcot Sreenivasachar St., Bangalore 2.

ಗೋಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

Edited, Printed & Published by Dharma Prachara Niratha M S Krishna Rao, at the Satyavadi Press Chamarajapuram, Mysore